ಶ್ರೀ ಬಾಪೂಗೌಡ ರಾಯಪ್ಪ.—ನಿರ್ದಿಷ್ಟವಾಗಿ ಷಹಪುರ್ ತಾಲ್ಲೂಕಿನಲ್ಲಿ ಅದರಲ್ಲೂ ಬಾಂಬೈ ಕರ್ನಾಟಕ, ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೆಲವು ಹಳ್ಳಿಗಳಲ್ಲಿ ಏನಾ ಕಾರಣವಾಗಿ ಕೆಲವೇ ಕುಟುಂಬದವರು ಇಂಥ ಒಂದು ಕೊರೆಗಳಿಂದಾಗಿ, ನೆಮ್ಮದಿಯಿಂದಿರದೆ' ವಾತಾವರಣ ಕೆಡತಕ್ಕ ಪ್ರಯತ್ನ ನಡೆದಿದೆ. ಇಂಥ ಹಳ್ಳಿಗಳ ಒಂದು ಪಟ್ಟಿಯನ್ನು ತಯಾರಿಸಿ, ಅಂಥ ಹಳ್ಳಿಗಳಲ್ಲಿ ಈ ಪುಂಡುಗುಂದಾಯವನ್ನು ಹಾಕಿ ಮುಂದೆ ಅಶಾಂತಿಪರಿಸ್ಥಿತಿಏರ್ಪಡುವುದನ್ನು ತಡೆಯುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ ?

ಅಧ್ಯಕ್ಷರು.—ವಿಚಾರಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಇಂಥ ಕಡೆಗಳಲ್ಲಿ ಒಂದು ಪೋಲೀಸ್ ಸ್ಟೇಷನ್ ಅನ್ನು ತರೆದು ಮರ್ದರ್ ಆಗದೆ ಇರುವ ಹಾಗೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಎಲ್ಲೆಲ್ಲೆ ಮರ್ದರ್ ಆಗುತ್ತದೆ ಅಲ್ಲಲ್ಲಿ ಪೋಲೀಸ್ ಸ್ಟೇಷನ್ ಅನ್ನು ಇಡಲಕ್ಕಾಗುತ್ತದೆಯೇ ?

SHORT NOTICE QUESTION AND ANSWER

Karnataka Fisheries Development Corporation

5. Sri KAGODU THIMMAPPA (Sagar).—

Will the Minister of State for Fisheries and Horticulture be pleased to state :—

(*a*) the date on which Karnataka Fisheries Development Corporation commenced working and the name of its Managing Director and the Secretary ;

(*b*) the profit earned by the Corporation every year since its inception ;

(*c*) the number of employees appointed directly so far in this Corporation and whether it has come to the notice of the Government That favouritism has taken place in the appointment of the employees ;

(*d*) whether it has come to the notice of the Government that the Managing Director and the Secretary together have connived with a private firm against the interes of the Corporation ; if so, the action taken by the Government in this behalf ?

Sri K. T. RATHOD (Minister of State for Fisheries and Horticulture).—

(*a*) The Corporation commenced working from 1—1—1971. Sri M. Jayaraj. Managing Director, Sri B. Mana Mohan, Secretary.

(*b*) No profit is earned since its inception.

(*c*) 55. The Government is not aware of any favouritism.

(*d*) An anonymous petition making certain allegation has been received and it is under investigation.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ (ಸಿ) ಗೆ ಉತ್ತರವಾಗಿ ನುಮಾರು 55 ಜನರನ್ನು ಇದುವರೆಗೂ ಮಿನುಗಾರಿಕೆ ಅಭಿವೃದ್ಧಿ ಕಾರ್ಪೊರೇಷನ್‌ಗೆ ನೇಮಕ ಮಾಡಲಾಗಿದೆ ಎಂದು ಹೇಳಿದ್ದೀರಿ, ಈ 55 ಜನರ ಪೈಕಿ, ಮ್ಯಾನೇಜಿಂಗ್ ಡೈರೆಕ್ಟರ್ ಜಯರಾಜ್ ಎನ್ನತಕ್ಕವರು, ಅವರ ಸಂಬಂಧೀಕರಿಗೆ, ಮತ್ತು ಬಿ. ಮನಮೋಹನ, ಸೆಕ್ರೆಟಿಯವರು, ಅವರ ಸಂಬಂಧೀಕರಿಗೆ ಅನೇಕ ಹುದ್ದೆಗಳಲ್ಲಿ ನೇಮಕ ಮಾಡಿದ್ದಾರೆ, ಇದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಕೆ. ಟಿ. ರಾಥೋಡ್. – ಈ 55 ಜನರನ್ನು ಏನು ತೆಗೆದುಕೊಳ್ಳಲಾಗಿದೆ, ಅದರಲ್ಲಿ ಯಾವ ಯಾವ ಜಾತಿಯವರು ಸೇರಿದ್ದಾರೆ, ಅವರು ಎಷ್ಟೆಷ್ಟು ಜನ ಇದ್ದಾರೆ ಎನ್ನುವ ವಿವರ ನನ್ನಲ್ಲಿದೆ. ಅದರಲ್ಲಿ ಮೊಗವೀರ ಜಾತಿಗೆ ಸೇರಿದವರು 12 ಜನ ಇದ್ದಾರೆ. ಅಲ್ಲದೆ ಬೇರೆ ಬೇರೆ ಜನಾಂಗಕ್ಕೆ ಸೇರಿದವರೂ ಇದ್ದಾರೆ ಕೋಟಿಯ ಜಾತಿಯವರು 4, ಕ್ರಿಶ್ಚಿಯನ್ಸ್ 7, ಕೋಂಬರ ಪಂಥ 4, ಸೇರಿಗಾ–1, ಭಂಟ್-2, ಪಾಟೆಸ್ಪೆಂಟ್-2, ಬ್ರಾಹ್ಮಣರು-2, ಮುಸ್ಲಿಮ್ಸ್,–1, ಅಮೇರೆಲೆ, ತೀಯಾ-1 ಪೆಡ್ಯೂಲ್ಡ್‌ಕ್ಯಾಸ್ಟ್-7 ಮತ್ತು ಪೆಡ್ಯೂಲ್ಡ್‌ಟ್ರೈಬ್ಸ್-2, ಬಿಲ್ಲವರು–1, ಮುಕ್ಕರು—1, ದೇವಾಡಿಗ—1, ಗಾಣಿಗಾ—1, ಕಾರ್ಮಿಯವರು—1, ಸಾಲಿಗಾ – 1.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ವಿವಿಧ ಜಾತಿಯವರ ಒಂದು ಪಟ್ಟಿಯನ್ನು ಹೇಳಿದ್ದಾರೆ. ಅದರಲ್ಲಿ ಬ್ರಾಹ್ಮಣರನ್ನು ಇಬ್ಬರನ್ನು ಬಿಟ್ಟುಬಿಟ್ಟರೆ ಮತ್ತು ಕ್ರಿಶ್ಚಿಯನ್ಸ್ ಬಿಟ್ಟು ಬಿಟ್ಟರೆ, ಉಳಿದವರೆಲ್ಲರೂ ಸಂಪೂರ್ಣವಾಗಿ ದಕ್ಷಿಣ ಕನ್ನಡ ಜಿಲ್ಲೆಯವರೇ ಇದ್ದಾರೆ. ಈ ರೀತಿಯಾಗಿ ನೇಮಕ ಮಾಡುತಕ್ಕ ಕಾಲದಲ್ಲಿ ಪ್ರಾಧಾನ್ಯತೆಯನ್ನು ಒಂದು ಜಿಲ್ಲೆಗೆ ಕೊಟ್ಟಿದ್ದು ಏಕೆ ? ಕಾರ್ಪೊರೇಷನ ಅಧ್ಯಕ್ಷರು, ಆ ಜಿಲ್ಲೆಯವರು, ಆದ್ದರಿಂದ ಒಂದೇ ಜಿಲ್ಲೆಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆ ಅಲ್ಲವೇ ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ. ಕಾರ್ಪೊರೇಷನ್ ಕಾರ್ಯಕಲಾಪಗಳು ನಡೆಯುವುದು ಸೌತ್‌ಕೆನರಾ ಜಿಲ್ಲೆಯಲ್ಲಿ. ಮತ್ತು ಉತ್ತರಕನ್ನಡ ಜಿಲ್ಲೆಯಲ್ಲ. ಇದರ ಹೆಡ್ ಆಫೀಸ್ ಅಲ್ಲಿರುವುದರಿಂದ, ಹೆಚ್ಚಾಗಿ ಇಲಾಖೆಯವರು ಡೆಪ್ಯೂಟೇಷನ್ ಮೇರೆಗೆ ಇದ್ದಾರೆ. ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಅವರು ನೇಮಕಗಳನ್ನು ಮಾಡಿದ್ದಾರೆ. ಬೇರೆಯವರಿಗೆ ಅವಕಾಶ ಕೊಡಬಾರದು ಎಂದಲ್ಲ. ಬಹುಶ : ಬೇರೆ ಕಡೆಯಿಂದ ಬಂದಿರತಕ್ಕ ಉದ್ಯೋಗದುವಾರರು ಇದರಲ್ಲಿ ಇರಬಹುದು ಎಂದು ನನ್ನ ಅಭಿಪ್ರಾಯ.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು (ಡಿ)ಗೆ ಉತ್ತರವಾಗಿ ಯುನಾನಿಮಸ್ ಪಿಟಿಷನ್ ಬಂದಿದೆ ಎಂದು ಹೇಳಿದ್ದೀರಿ. ಎಷ್ಟು ಅರ್ಜಿಗಳು ಬಂದಿವೆ, ಅವು ಯಾವ ಯಾವ ಮಟ್ಟದಲ್ಲಿವೆ, ಎಷ್ಟು ದಿವಸಗಳಿಂದ ಇದರ ಬಗ್ಗೆ ತಾವು ತನಿಖೆ ಮಾಡುತ್ತಿದ್ದೀರಿ ?

ಶ್ರೀ ಕೆ. ಟಿ. ರಾಥೋಡ್.— ಯುನಾನಿಮಸ್ ಪಿಟಿಷನ್ ಒಂದು ಬಂದಿದೆ. ಅದು ಸರ್ಕಾರದ ಪರೀಶೀಲನೆಯಲ್ಲದೆ, ಅದರ ಬಗ್ಗೆ ತನಿಖೆ ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ.—ಈ ಮಿನುಗಾರಿಕಾ ಕಾರ್ಪೊರೇಷನ್‌ನಲ್ಲಿ ಒಂದೇ ಜಿಲ್ಲೆಯವರಿಗೆ ಕೆಲಸ ಸಿಕ್ಕಿದೆ ಎಂದು ತಮ್ಮ ಉತ್ತರದಿಂದ ಗೊತ್ತಾಗಿದೆ. ಅದೇ ರೀತಿಯಲ್ಲಿ ಇತರೆ ಜಿಲ್ಲೆಗಳಲ್ಲಿಯೂ ಕೂಡ ಮಿನನ್ನು ಕ್ಯಾನಿಂಗ್ ಮಾಡುವುದರಲ್ಲಿ ಮತ್ತು ಪ್ರತಿಯೊಂದರಲ್ಲಿಯೂ ಬೇಕಾದಷ್ಟು ಜನ ಗ್ರಾಜುಯೇಷನ್ ಮತ್ತು ಡಿಪ್ಲಮೋಗಳನ್ನು ಪಡೆದವರು ಇದ್ದಾರೆ. ಅಂಥವರನ್ನೂ ಕೂಡ ಇಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಕೆ.ಟಿ. ರಾಥೋಡ್.—ಈಗ ಕರಾವಳಿ ಪ್ರದೇಶದಲ್ಲಿ, ಅಂದರೆದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾರು ಯಾರು ವೆರೀನ್ ಸ್ಕೈಡ್‌ನಲ್ಲಿ ತರಬೇತಿಯನ್ನು ಹೊಂದಿದ್ದಾರೋ ಅವರಿಗೆ ಪ್ರೋತ್ಸಾಹ ಕೊಡುವುದಕ್ಕೆ ಹುದ್ದೆಗಳನ್ನು ಕೊಟ್ಟಿದಾರೆ. ಆದರೆ ಎಲ್ಲೆಲ್ಲಿ ಅವಕಾಶ ಇದೆ, ಇಲಾಖೆಯಲ್ಲಯೇ ಜಾಗ ಖಾಲಿ ಇರಲೀ, ಕಾರ್ಪೊರೇಷನ್‌ನಲ್ಲಿಯೇ ಜಾಗ ಖಾಲೀ ಇರಲಿ, ಅಲ್ಲಲ್ಲ ಇವರನ್ನು ಸೇರ್ಪಡಿಸಲಕ್ಕೆ ಅವಕಾಶ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಮಿನುಗಾರಿಕಾ ಅಭಿವೃದ್ಧಿಯ ಕಾರ್ಪೊರೇಷನ್‌ನ ಮ್ಯಾನೇಜಿಂಗ್, ಡೈರೆಕ್ಟರ್ ಆಗಿ ಜಯರಾಜ್ ಎನ್ನುವವರನ್ನು ನೇಮಕ ಮಾಡಿದ್ದೀರಿ. ಅವರಿಗೆ ಇರತಕ್ಕ ಅರ್ಹತೆಗಳು ಏನು ? ಮುಖ್ಯವಾಗಿ ಕಾರ್ಪೊರೇಷನ್‌ಗೆ ಮಿನುಗಾರಿಕೆಯಲ್ಲಿ ಹೆಚ್ಚಿನ ಅರ್ಹತೆಯನ್ನು ಪಡೆದವರನ್ನು ಹಾಕಬೇಕು. ಇಂಥ ಪರ್ಸನರ್ ಇಂಟರೆಸ್ಟ್ ಇರುವವರನ್ನೇ ಮ್ಯಾನೇಜಿಂಗ್ ಡೈರೆಕ್ಟರ್‌ನ್ನಾಗಿ ಮಾಡಿದರೆ, ಅವರ ಹತ್ತಿರದ ಸಂಬಂಧೀಕರನ್ನು ಸೇರಿಸುವುದಲ್ಲದೆ, ಬೇರೆಯವರಿಗೂ ಅಲ್ಲಿ ಸೇರುವುದಕ್ಕೆ ಅವಕಾಶವಾಗುವುದಿಲ್ಲ. ಇವರಿಗೆ ಅನೇಕ ವ್ಯವಹಾರ

(ಶ್ರೀ ಎಂ. ಎಸ್. ಕೃಷ್ಣನ್)

ವಹಿವಾಟು ಇರುತ್ತದೆ. ಇಂಥವರನ್ನು ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ಮಾಡಿದರೆ, ಕಾರ್ಪೊರೆ ರೇಷನ್ ಉಳಿಯುತ್ತದೆಯೇ ? ಯಾರೊಬ್ಬರಿಗೆ ಅನುಕೂಲಮಾಡಿಕೊಡುವುದಕ್ಕೋಸ್ಕರ ಇದನ್ನು ಮಾಡಿದ್ದಾರೆ ಎನ್ನುವ ಆಪಾದನೆಗೆ ತಾವು ಗುರಿಯಾಗುವುದಿಲ್ಲವೇ ? ಇದನ್ನು ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಜಯರಾಜ್ ಎನ್ನುವವರು ಮೀನುಗಾರಿಕೆಯ ಬಗ್ಗೆ ವಿಶೇಷವಾಗಿ ತರಪೇತಿ ಹೊಂದಿದವರು, ಅವರು ಯೋಗ್ಯ ಅಧಿಕಾರಿಗಳು ಎಂದು ಹೇಳಿ ಅವರನ್ನು ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಎಂದು ನೇಮಕ ಮಾಡಲಾಗಿದೆ. ಆದರೆ ಅವರು, ತಮ್ಮ ಜನಾಂಗದವರೀಗೇ ಅವಕಾಶ ಮಾಡುತ್ತಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ. ಆದರೆ ಕಾರ್ಪೊರೇಷನ್‌ನಲ್ಲಿ ಯಾವರೀತಿಯ ಕಾರ್ಯಕಲಾಪಗಳು ನಡೆದಿವೆ ಎನ್ನುವುದನ್ನು ನೋಡಿದರೆ, ಅದು ಹೆಚ್ಚಿನ ಪ್ರಗತಿ ಹೊಂದುತ್ತಿದೆ. ಇವರಿಂದ ಕಾರ್ಪೊರೇಷನ್ ಇಂಟರೆಸ್ಟ್‌ಗೂ ಮತ್ತು ಸರ್ಕಾರದ ಇಂಟರೆಸ್ಟ್‌ಗೂ ಯಾವರೀತಿಯ ವ್ಯತಿರಿಕ್ತವಾದ ವ್ಯವಹಾರಗಳು, ಆಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೇಳಿದ್ದು ಪಕ್ಕದಲ್ಲಿ ಇನ್ನೊಂದು ಅಂಗಡಿ ನಡೆಸುತ್ತಿದ್ದಾರೆ. ಇವರನ್ನು ಕಾರ್ಪೊರೇಷನ್ನಿಗೆ ಮ್ಯಾನೇಂಜಿಗ್ ಡೈರೆಕ್ಟರ್ ಮಾಡಿದರೆ ತನ್ನ ಅಂಗಡಿ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ರೀತಿಯಲ್ಲಿ ವಿಷಯ ನಡೆಯುತ್ತಾ ಇದೆ.

ಶ್ರೀ ಕೆ. ಟಿ. ರಾಥೋಡ್.—ಸರ್ಕಾರದ ಗಮನಕ್ಕೆ ಬಂದ ಹಾಗೆ ಅಂತಹ ಅವ್ಯವಹಾರ ಕಂಡುಬಂದಿಲ್ಲ. ಅಂಥ ನಿರ್ದಿಷ್ಟ ನಿದರ್ಶನ ತಮ್ಮ ಗಮನಕ್ಕೆ ಬಂದದ್ದು ಹೇಳಿದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀ ಜಯರಾಜರ ಸಹೋದರರರು ಮೀನು ಉದ್ಯಮ ನಡೆಸುತ್ತಾರೆ. ಈ ಶ್ರೀ ಜಯರಾಜ್ ಎನ್ನತಕ್ಕವರು ಸಿಂಗಡಿ ಕೊಳ್ಳತಕ್ಕ ಸಂದರ್ಭದಲ್ಲಿ ಸರ್ಕಾರಿ ಕಾರ್ಪೊರೇಶನ್ನಿನ ವೆಚ್ಚದಲ್ಲಿ ಸಿಂಗಡಿ ಕೊಂಡು ತಮ್ಮ ಸಹೋದರರ ಕಾರ್ಖಾನೆಗೆ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೆ ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಒಂದು ಸೀತಲ ಗೃಹವನ್ನು ಜಯರಾಜ್ ಅವರ ಹೆಂಡತಿ ಡೈರೆಕ್ಟರಾಗಿರತಕ್ಕ ಸಂಸ್ಥೆಗೆ ಬಾಡಿಗೆಗೆ ಕೊಟ್ಟಿರತಕ್ಕದ್ದು ನಿಜವೇ ?

ಶ್ರೀ ಕೆ. ಟಿ. ರಾಥೋಡ್.—ಎರಡನೇ ಪ್ರಶ್ನೆಗೆ ಉತ್ತರ ಹೇಳಬೇಕಾದರೆ, ಅವರದ್ದೇ ಆದ ಸಂಸ್ಥೆ ಇದೆ ಎಂದು ಹೇಳಿದಿರಿ. ಅವರ ಕುಟುಂಬದವರು ಇಂಟೆರೆಸ್ಟ್ ಇಟ್ಟುಕೊಂಡಂಥ ಸಂಸ್ಥೆ ಇದ್ದುದು ಸರ್ಕಾರದ ಗಮನದಲ್ಲಿ ಇದೆ. ಅದಕ್ಕೆ ನಿಯಮ ಬದ್ಧವಾಗಿ ಸರ್ಕಾರದಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ಅವರು ಕೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ'—ಪತ್ನಿಯವರು ಡೈರೆಕ್ಟರಾಗಿರತಕ್ಕ ಸಂಸ್ಥೆಗೆ ಕುಂದಾಪುರದಲ್ಲಿ ಕಾರ್ಪೊರೇಷನ್ನಿನ ಸೀತಲ ಗೃಹದ ಸಹಾಯ ಕೊಟ್ಟಿರುವುದು ನಿಜವೇ ?

ಶ್ರೀ ಕೆ. ಟಿ. ರಾಥೋಡ್.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಆರ್ ಶ್ರೀನಿವಾಸುಲು ನಾಯ್ಡು.—ಏನು ರಾಥ ಗಳಿಸಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಅಂತಹ ಸಂಸ್ಥೆ ಮುಚ್ಚುವುದು ಒಳ್ಳೆಯದಲ್ಲವೇ ? ಒಂದು ಸಮಯ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗಿದ್ದರೆ, ಏನು ಕಾರ್ಯ ಕ್ರಮ ತೆಗೆದುಕೊಳ್ಳ ಬಹುದು ಎನ್ನುವ ವಿವರ ಕೊಡುತ್ತೀರಾ ?

ಶ್ರೀ ಕೆ. ಟಿ. ರಾಥೋಡ್—ಮೂರುವರೆ ವರ್ಷದಿಂದ ಕಾರ್ಪೊರೇಷನ್ ಅಸ್ತಿತ್ವದಲ್ಲಿದೆ. ಕಾರ್ಪೊರೇಷನ್ ಸಾಧಿಸಿರುವಂಥ ಪ್ರಗತಿ ಹೇಳಬೇಕೆಂದರೆ 1970-71ರಲ್ಲಿ 9 ಲಕ್ಷ 46 ಸಾವಿರ ರೂಪಾಯಿಗಳ ವ್ಯವಹಾರ ಮಾಡಿದ್ದಾರೆ ಆಮೇಲೆ 1971-72ರಲ್ಲಿ 23ಲಕ್ಷ 84ಸಾವಿರ ರೂಪಾಯಿಗಳ ವ್ಯವಹಾರ ಮಾಡಿದೆ. ಲಾಭ ಇಲ್ಲ. ಆದರೆ ನಷ್ಟ ಕಡಿಮೆ ಆಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸ್ಥಿತಿಗೆ ಬಂದಿದೆ. ಈ ವರ್ಷ ಸ್ವಲ್ಪ ಲಾಭವನ್ನು ಪಡೆಯುವ ಪ್ರಗತಿಯನ್ನು ತಂದಿದ್ದಾರೆ.

MADAM SPEAKER.—Now Question hour is over.

3-00 P. M.

QUESTIONS FOR ANSWERS ON THE DAY

(but not taken up)

K. S. R. T. C. Depot at Bidar

5.0. Sri BAPURAO ANANDRAO (Basavakalyan).—

Will the Minister for Transport and Housing be pleased to state.—

(*a*) the state at which the sanction and establishment of Karnataka State Road Transport Corporation Depot at Bidar is pending ;

(*b*) the steps taken to expedite its sanction ?

Sri K. H. RANGANATH (Minister for Transport and Housing). —

(*a*) Land acquisition proceedings to construct a Depot at Bidar are pending before the Deputy Commissioner, Bidar.

(*b*) A Depot will be established at Bidar after all the routes in the District are nationalised by Karnataka State Road Transport Corporation. The Corporation has already taken action to conduct traffic and route survey etc. in the area.

Seizure of Food Grains

548. Sri MALLIKARJUN KHARGE (Gurmitkal).—

Will the Minister for Food and Forests be pleased to state.—

(*a*) the quantity of foodgrains by the Government during the month of December 1973 and January 1974 ;

(*b*) the total quantity of foodgrains released by Government for sale to the public ;

(*c*) the action the Government had taken against the holders ?